ಬೆಳೆ ವಿಮಾ ಯೋಜನೆ.

1568(2142) ಡಾ : ವಿಜಯಕುಮಾರ್ ಭೀಮಣ್ಣ ಖಂಡ್ರೆ (ಭಾಲ್ಕಿ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಎಲ್ಲಾ ಮಳೆ ಆಶ್ರಿತ ಬೆಳೆಗಳನ್ನು ಒಳಗೊಂಡಂತೆ ಬೆಳೆ ವಿಮಾ ಯೋಜನೆಯನ್ನು ಜಾರಿಗೊಳಿಸುವ ಅವಶ್ಯಕತೆ ಇದೆಯೆಂದು ಸರ್ಕಾರವು ಭಾವಿಸಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಆಗಿರುವ ಪ್ರಗತಿಯೇನು?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ಹೌದು

ಆ) ಒಣ ಭೂಮಿ ಪ್ರದೇಶದಲ್ಲಿ ಬೆಳೆ ವಿಮಾ ಯೋಜನೆಯನ್ನು ಜಾರಿಗೊಳಿಸುವ ವಿಷಯವನ್ನು ಪರಿಶೀಲಿಸಿ, ಸಚಿವ ಸಂಪುಟಕ್ಕೆ ಸೂಕ್ತ ಶಿಫಾರಸ್ಸನ್ನು ನೀಡುವ ಸಲುವಾಗಿ ಕರ್ನಾಟಕದ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿದೆ.

ಈ ಸಮಿತಿಯ ಹಲವಾರು ಬಾರಿ ಸಭೆ ಸೇರಿ ಕೆಲವಾರು ಮಾದರಿಗಳನ್ನು ವಿಶ್ಲೇಷಿಸಿತು. ಈ ಮಧ್ಯೆ ಕೇಂದ್ರ ಸರ್ಕಾರವು ಎಲ್ಲಾ ಬೆಳೆಗಳಿಗೂ ಮತ್ತು ಎಲ್ಲಾ ರೈತರಿಗೂ ಅನ್ವಯವಾಗುವಂತೆ ಒಂದು ಪರಿಷ್ಕೃತ ವ್ಯಾಪಕ ಬೆಳೆ ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸುತ್ತಿರುವುದಾಗಿ ಘೋಷಿಸಿತ್ತು. ಆದುದರಿಂದ, ಉಪ ಸಮಿತಿಯು ಇದರ ಬಗ್ಗೆ ಕೇಂದ್ರ ಸರ್ಕಾರದ ಅಂತಿಮ ನಿರ್ಣಯಕ್ಕೆ ಕಾಯಬಹುದು ಎಂದು ದಿನಾಂಕ : 26-6-98 ರಂದು ಜರುಗಿದ ಸಭೆಯಲ್ಲಿ ನಿರ್ಧರಿಸಿತು.

ಕೃಷಿ ಇಲಾಖೆಯಲ್ಲಿರುವ ಕೃಷಿ ಸಹಾಯಕ ಹುದ್ದೆಗಳ ಭರ್ತಿ.

1569(2157) ಶ್ರೀ ವಸಂತ ವಿ. ಸಾಲಿಯಾನ (ಕಾಪು) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಕೃಷಿ ಸಹಾಯಕರ ಹುದ್ದೆಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರ ನೀಡುವುದು;

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ರಾಜ್ಯದ ಕೃಷಿ ಇಲಾಖೆಯಲ್ಲಿ 139 ಕೃಷಿ ಸಹಾಯಕರ ಹುದ್ದೆಗಳು ಖಾಲಿ ಇರುತ್ತವೆ. ಜಿಲ್ಲಾವಾರು ಖಾಲಿ ಹುದ್ದೆಗಳ ವಿವರಗಳ ತಖ್ತೆ ಲಗತ್ತಿಸಿದೆ.

ಆ) ಸರ್ಕಾರದ ಆದೇಶ ಸಂಖ್ಯೆ: ಎಹೆಚ್‌ಡಿ 278 ಎಎಂಎಲ್ 94, ದಿನಾಂಕ: 31-05-1995ರ ಅನ್ವಯ ಮುಂದೆ ಇಲಾಖೆಯಲ್ಲಿ ಕೃಷಿ ಸಹಾಯಕರ ಹುದ್ದೆಗಳಿಗೆ ಯಾವುದೇ ನೇಮಕಾತಿ ಇರುವುದಿಲ್ಲ.

ಜಿಲ್ಲಾವಾರು ಕೃಷಿ ಸಹಾಯಕರ ಖಾಲಿ ಹುದ್ದೆಗಳ ಬಗ್ಗೆ ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು		ಖಾಲಿ ಹುದ್ದೆಗಳು
1.	ಬೆಂಗಳೂರು ನಗರ	-	12
2.	ಬೆಂಗಳೂರು ಗ್ರಾಮಾಂತರ	-	05
3.	ಕೋಲಾರ	-	12
4.	ತುಮಕೂರು	-	05
5.	ಮಂಡ್ಯ	-	15
6.	ಮೈಸೂರು	-	14
7.	ಚಾಮರಾಜನಗರ	-	12
8.	ಕೊಡಗು	-	15
9.	ಹಾಸನ	-	13
10.	ದಕ್ಷಿಣ ಕನ್ನಡ	-	16
11.	ಉಡುಪಿ	-	05
12.	ಚಿಕ್ಕಮಗಳೂರು	-	—
13.	ಚಿತ್ರದುರ್ಗ	-	—
14.	ದಾವಣಗೆರೆ	-	—
15.	ಶಿವಮೊಗ್ಗ	-	08
16.	ಧಾರವಾಡ	-	—

17.	ಹಾವೇರಿ	-	—
18.	ಗದಗ್	-	—
19.	ಬಳ್ಳಾರಿ	-	04
20.	ಕಾರವಾರ	-	05
21.	ಬಿಜಾಪುರ	-	—
22.	ಬಾಗಲಕೋಟೆ	-	—
23.	ಬೆಳಗಾಂ	-	—
24.	ಗುಲ್ಬರ್ಗಾ	-	—
25.	ರಾಯಚೂರು	-	—
26.	ಕೊಪ್ಪಳ	-	—
27.	ಬೀದರ್	-	—
		ಒಟ್ಟು	139

ವಸತಿ ರಹಿತರೆಂದು ಗುರುತಿಸಲಾದ ಕುಟುಂಬಗಳು.

1571(2161) ಶ್ರೀ ವಸಂತ ವಿ. ಸಾಲಿಯಾನ (ಕಾಪು) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ 1996ರಿಂದ 1999ರ ವರೆಗೆ ವಸತಿ ರಹಿತರೆಂದು ಗುರುತಿಸಲಾದ ಕುಟುಂಬಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

ಆ) ಆ ಪೈಕಿ ಮನೆ, ನಿವೇಶನಗಳನ್ನು ಮಂಜೂರು ಮಾಡಲಾದ ಕುಟುಂಬಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಅನುಬಂಧದಲ್ಲಿ ನೀಡಲಾಗಿದೆ.

ಆ) ಅನುಬಂಧದಲ್ಲಿ ನೀಡಲಾಗಿದೆ.